ವಿದ್ಯುತ್ ಕೊಡುವ ವ್ಯವಸ್ಥೆಯಾಗಬೇಕು. ಆ ನಿಟ್ಟಿನಲ್ಲಿ ಸರ್ಕಾರ ಸಹಾಯ ಮಾಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು): ಉತ್ತರ ಕನ್ನಡ ಜನತೆಗೆ ನಿಜಕ್ಕೂ ಕೂಡ ಇಡೀ ರಾಜ್ಯದ ಜನತೆ ಎಷ್ಟೇ ಅಭಿನಂದನೆ ಸಲ್ಲಿಸಿದರೂ ಕೂಡ ಸಾಕಾಗುವುದಿಲ್ಲ. ಅಷ್ಟು ವಿದ್ಯುತ್ ಕೊಟ್ಟಂಥ ಜಿಲ್ಲೆಗೆ ತೊಂದರೆಯಾಗುತ್ತಿದೆ. ಕಳೆದ ವಾರ ಆ ಜಿಲ್ಲೆಯ ಎಲ್ಲಾ ಶಾಸಕರ ಮಂತ್ರಿಗಳ ಜೊತೆಗೆ ವಿಶೇಷವಾದ ಸಭೆಯನ್ನು ನಾವು ಮಾಡಿದ್ದೇವೆ. ಉತ್ತರ ಕನ್ನಡ ಜಿಲ್ಲೆಗೆ ಏನೇನಾಗ ಬೇಕೆನ್ನುವುದರ ಬಗ್ಗೆ ಕೂಡ ಅವರ ಜೊತೆ ಚರ್ಚಿಸಿದ್ದೇವೆ. ಅಲ್ಲಿ ಎಷ್ಟರಮಟ್ಟಿಗೆ ಪುನರ್‌ವಸತಿ ಆಗಬೇಕಾಗಿತ್ತೋ ಅದು ಆಗಿಲ್ಲ. ಯಾರ್ಯಾರು ಭೂಮಿ ಕಳೆದುಕೊಂಡು ಅತಂತ್ರರಾಗಿದ್ದರೋ ಅವರಿಗೆ ಪರಿಹಾರ ಸಿಕ್ಕಿಲ್ಲ. ಈ ಎಲ್ಲಾ ಅಂಶಗಳ ಬಗ್ಗೆಯೂ ಚರ್ಚೆ ಮಾಡಿದ್ದೇವೆ. ಆ ಭಾಗದಲ್ಲಿ ರಸ್ತೆಗಳು ಆಗಬೇಕೆನ್ನುವ ಅಂಶವನ್ನು ಹೇಳಿದ್ದಾರೆ. ಬ್ರಿಜ್ ಆಗಬೇಕೆಂದು ಹೇಳಿದ್ದಾರೆ. ಇವೆಲ್ಲವಕ್ಕೂ ಕೂಡ ಪ್ಲಾನ್, ಎಸ್ಟಿಮೇಟ್ ಎಲ್ಲಾ ಆಗಿ ಕಾರ್ಯಕ್ರಮ ಕೂಡ ಚಾಲೂ ಆಗುತ್ತಿದೆ. ಆ ಜಿಲ್ಲೆಯಲ್ಲಿ ಏನೇನು ಸಮಸ್ಯೆಗಳಿವೆ ಎನ್ನುವ ಬಗ್ಗೆ ಚರ್ಚಿಸಲು ದಿನಾಂಕ ಕೂಡ ನಿಗದಿಯಾಗಿತ್ತು. ನಾನು ಮತ್ತು ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರು, ನಮ್ಮ ಉನ್ನತ ಮಟ್ಟದ ಅಧಿಕಾರಿಗಳು ಇದೇ ತಿಂಗಳ 30, 31ನೇ ತಾರೀಖು ಅಲ್ಲಿಗೆ ಹೋಗಿ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಪರಿಹಾರ ಮಾಡಬೇಕೆಂದು ತೀರ್ಮಾನವಾಗಿತ್ತು. ಮಳೆ ಜಾಸ್ತಿ ಇದೆ ಎನ್ನುವುದಕ್ಕೋಸ್ಕರ ಒಂದು ವಾರ ಮುಂದೆ ಹಾಕಿದ್ದೇವೆ. ಆ ಜಿಲ್ಲೆಗೆ ಆಗಬೇಕಾದ ಎಲ್ಲಾ ವ್ಯವಸ್ಥೆಗಳನ್ನು ನಾವು ಖಂಡಿತ ಸರ್ಕಾರದ ಕಡೆಯಿಂದ ಮಾಡಿಕೊಡುತ್ತೇವೆ.

ಇ) ವಿಷಯ: ಗೋಕುಲ ಎಜುಕೇಷನ್ Foundation MSRIT ಸಂಸ್ಥೆಗೆ ಸೇರಿದ ಕೆಲವು ಗ್ರಾಮಗಳ ಸರ್ವೆ ನಂಬರುಗಳ ಖಾತಾ ನೋಂದಾವಣೆಯ ಬಗ್ಗೆ

ಶ್ರೀ ರವಿ ಸುಬ್ರಮಣ್ಯ (ಬಸವನಗುಡಿ): ಮಾನ್ಯ ಉಪಾಧ್ಯಕ್ಷರೆ, ಗೋಕುಲ ಎಜುಕೇಷನ್ Foundation MSRIT ಸಂಸ್ಥೆಗೆ ಸೇರಿದ ಕೆಲವು ಗ್ರಾಮಗಳ ಸರ್ವೆ ನಂಬರುಗಳ ಖಾತಾ ನೋಂದಾವಣೆಯ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್–4ರ ಮತ್ತಿಕೆರೆ ವ್ಯಾಪ್ತಿಯಲ್ಲಿ ಮೆ: ಗೋಕುಲ ಎಜುಕೇಷನ್ ಫೌಂಡೇಶನ್ ಸಂಸ್ಥೆ ಹಾಗೂ ಎಂ.ಎಸ್. ರಾಮಯ್ಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಟ್ರಸ್ಟ್ ರವರಿಗೆ ಸಂಬಂಧಪಟ್ಟ ಕಟ್ಟಡಗಳು ಈ ಕೆಳಕಂಡಂತಿರುತ್ತವೆ.

1. ಮತ್ತಿಕೆರೆ ಗ್ರಾಮ ಸರ್ವೆ ನಂ. 8, 9, 10 ಮತ್ತು 11 ರಲ್ಲಿ (ಎಂ.ಎಸ್.ಆರ್. ಇಂಜಿನಿಯರಿಂಗ್ ಕಾಲೇಜ್, ಡಿಗ್ರಿ ಕಾಲೇಜ್ ಹಾಗೂ ಪಾಲಿಟೆಕ್ನಿಕ್ ಮುಂತಾದವು) ಇರುವ ವಿದ್ಯಾ ಸಂಸ್ಥೆಗಳಿಗೆ ಮುನಿಸಿಫಲ್ ಸಂಖ್ಯೆ 3, ಎಂಎಸ್‌ಆರ್‌ಇ ಕಾಲೇಜ್ ರಸ್ತೆ ಎಂಬುದಾಗಿ ಖಾತೆಯನ್ನು ಬಹಳ ಹಿಂದಿನಿಂದಲೂ (1980) ಮೆ: ಎಂ.ಎಸ್. ರಾಮಯ್ಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಮೆ: ಗೋಕುಲ ಎಜುಕೇಶನ್ ಫೌಂಡೇಶನ್ ಸಂಸ್ಥೆ ಎಂಬುದಾಗಿ ದಾಖಲಾಗಿರುತ್ತದೆ.
2. ಮತ್ತಿಕೆರೆ ಸರ್ವೆ ನಂ. 7ರಲ್ಲಿ ಮುನಿಸಿಫಲ್ ಸಂಖ್ಯೆ 12ರಲ್ಲಿ ಎಂಬುದಾಗಿ ನೀಡಿ ಖಾತೆಯನ್ನು "ಅನುಭವದಾರರು" ಮೆ: ಗೋಕುಲ ಎಜುಕೇಶನ್ ಫೌಂಡೇಶನ್ ಸಂಸ್ಥೆ, ಎಂಎಸ್. ರಾಮಯ್ಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ರವರಿಗೆ 2009ರಲ್ಲಿ ಖಾತೆ ನೀಡಲಾಗಿರುತ್ತದೆ.
3. ದೇವಸಂದ್ರ ಗ್ರಾಮ ಸರ್ವೆ ನಂ. 27 ಮತ್ತು 29ರಲ್ಲಿ ಹಾಗೂ ಚಿಕ್ಕಮಾರನಹಳ್ಳಿ ಗ್ರಾಮ ಸರ್ವೆ ನಂ. 6 ರಿಂದ 11 ಮತ್ತು 44, ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜ್ ಹಾಗೂ ಹಾಸ್ಪಿಟಲ್ ಕಟ್ಟಡಗಳಿಗೆ ಖಾತೆಗಳನ್ನು ನೊಂದಾಯಿಸಿಕೊಳ್ಳದೇ ಇದ್ದ ಕಾರಣ 2007ರಲ್ಲಿ ಕಂದಾಯವನ್ನು ನಿಗದಿಪಡಿಸಿ ದಿನಾಂಕ 18–7–2007ರಂದು ವಿಶೇಷ ಸೂಚನಾ ಪತ್ರಗಳನ್ನು ಜಾರಿ ಮಾಡಿ, ಅನುಭವದಾರ ಖಾತೆಗಳನ್ನು ಮುನಿಸಿಫಲ್ ಸಂಖ್ಯೆ 31, 31/1 ರಿಂದ 31/11 ಮತ್ತು 32, 32/1 ರಿಂದ 32/6ರವರೆಗೆ ನ್ಯೂ ಬಿ.ಇ.ಎಲ್. ರಸ್ತೆ, ಚಿಕ್ಕಮಾರೇನಹಳ್ಳಿ ಎಂಬುದಾಗಿ ಕಂದಾಯ ಬೇಡಿಕೆಯನ್ನು ನಿಗದಿಪಡಿಸಲಾಗಿರುತ್ತದೆ.

ಶ್ರೀ ರವಿ ಸುಬ್ರಮಣ್ಯ: ಮತ್ತಿಕೆರೆ ಸರ್ವೆ ನಂ. 7ರಲ್ಲಿ Municipal ನಂ. 12 ಎಂಬುದಾಗಿ ನೀಡಿ ಖಾತೆಯನ್ನು ಅನುಭವದಾರರು ಗೋಕುಲ್ ಎಜುಕೇಷನ್ ಫೌಂಡೇಷನ್ ಸಂಸ್ಥೆ, M.S. Ramaiah Institute of Technology. ಇವರಿಗೆ 2009ರಲ್ಲಿ ಖಾತೆ ನೀಡಿದ್ದೇವೆಂದು ಹೇಳಿದ್ದಾರೆ. ನಾನು ಕೇಳುವುದೇನೆಂದರೆ,

Karnataka Land Reforms Actನಲ್ಲಿ ಯಾವುದೇ ಇನಾಮತಿ ಜಮೀನನ್ನು ಯಾವುದಾದರೊಂದು ಸಂಸ್ಥೆಗೆ ಕೊಡಲಿಕ್ಕೆ ಅವಕಾಶವಿದೆಯೇ? ಮತ್ತಿಕೆರೆ ಗ್ರಾಮದ ಸರ್ವೆ ನಂ. 7ರಲ್ಲಿ 4 ಎಕರೆ 39 ಗುಂಟೆ ಜಮೀನು ಈ Institutionsಗೆ ಮಂಜೂರಾಗಿದೆ ಎಂದು ಹೇಳಿದ್ದಾರೆ. ಇದನ್ನು ಯಾವ ಕಾನೂನಿನಡಿಯಲ್ಲಿ ಕೊಟ್ಟಿದ್ದಾರೆನ್ನುವುದನ್ನು ತಿಳಿಯಲು ಬಯಸುತ್ತೇನೆ. ಅದೇ ರೀತಿ, KLR Act 1961 ನಿಯಮ 79, A B ಮತ್ತು 80ರಲ್ಲಿ ಇನಾಮತಿ ಜಮೀನಿಗೆ ಅವಕಾಶವಿಲ್ಲವೆಂದು ಈ ಸದನದ ಮುಖಾಂತರ ನಾನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ, ಆ ಜಮನಿಗೆ ಮಹಾನಗರ ಪಾಲಿಕೆಯಿಂದ ಖಾತೆಯನ್ನೇನು ಕೊಟ್ಟಿದ್ದೇವೆಂದು ಹೇಳಿದ್ದಾರೆ, ಅದು holder ಖಾತೆಯೇ? ಅಥವಾ ಅನುಭವದಾರರ ಖಾತೆಯೇ ಅಥವಾ ಸ್ವತ್ತಿನ ಖಾತೆಯೇ ಎನ್ನುವುದನ್ನು ನಾನು ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಖಾತಾ ಕೊಡುವುದಕ್ಕೆ ಮುಂಚೆ ಈ ಲ್ಯಾಂಡ್ ಏನಾದರೂ ಪರಿವರ್ತನೆಯಾಗಿದೆಯೇ? ಪರಿವರ್ತನೆಯಾಗಿ, 1980ನೇ ಇಸವಿಯಿಂದ ಅಲ್ಲಿ building ಇವೆ ಎಂದು ಹೇಳುತ್ತಿದ್ದಾರೆ, ಇದಕ್ಕೆ ನಕ್ಷೆಯ ಮಂಜೂರಾತಿ ಪಡೆದುಕೊಂಡು ಇವರು buildingಗಳನ್ನು ಕಟ್ಟಿದ್ದಾರೆಯೇ? ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನಕ್ಷೆಯ ಮಂಜೂರಾತಿ ಮಾಡಬೇಕಾದರೆ, ಯಾವುದಾದರೂ ನಕ್ಷೆಗಳು ಇಲ್ಲಿ ನಕಲಿಯಾಗಿದ್ದರೆ ಅವರ ಮೇಲೆ ಕ್ರಿಮಿನಲ್ ಕೇಸನ್ನು book ಮಾಡಿದ್ದಾರೆಯೇ ಎಂಬ ಬಗ್ಗೆ ತಿಳಿದುಕೊಳ್ಳಲು ಇಷ್ಟ ಪಡುತ್ತಿದ್ದೇನೆ. ಚಿಕ್ಕಮಾರನಹಳ್ಳಿಯ ಸರ್ವೆ ನಂಬರ್ 6, 7, 8, 9, 10, 11, 12, 16, 20, 21, 44. ಹಾಗೂ ದ್ಯಾವಸಂದ್ರ ಸರ್ವೆ ನಂಬರ್ 27, ಮತ್ತಿಕೆರೆ ಸರ್ವೆ ನಂಬರ್ 67, 68, 69, 70, 79. ಪೂರ್ಣಾಪುರ ಸರ್ವೆ ನಂಬರ್ 34, 35, 36, 27, 38 ಈ ಎಲ್ಲಾ ಜಮೀನುಗಳಿಗೆ ಸಂಬಂಧಪಟ್ಟಂತೆ ಒಟ್ಟಾರೆ 61 ಎಕರೆ 26.5 ಗುಂಟೆ ಜಮೀನನ್ನು ಗೋಕುಲ ಎಜ್ಯುಕೇಷನ್ ಸಂಸ್ಥೆಗೆ U.L.C. Permission ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರಲ್ಲಿ 14 ಎಕರೆ 29.30 ಬಿ ಗುಂಟೆ ಗ್ರೂಪ್ ಹೌಸಿಂಗ್ ಮಾಡುತ್ತೇವೆಂದು ಮುಚ್ಚಳಿಕೆ ಕೊಟ್ಟು ತೆಗೆದುಕೊಂಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಗಮನ ಸೆಳೆಯುವ ಸೂಚನೆಯಲ್ಲಿ ಎಷ್ಟು ಹೊತ್ತು ಕ್ಲಾರಿಫಿಕೇಷನ್ ಕೇಳುವುದು? ಇಲ್ಲದಿದ್ದರೆ ಅರ್ಧ ಗಂಟೆ ಚರ್ಚೆಯನ್ನಾದರು ಮಾಡೋಣ.

ಉಪಾಧ್ಯಕ್ಷರು: ತಾವು ಸಂಕ್ಷಿಪ್ತವಾಗಿ ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಶ್ರೀ ರವಿ ಸುಬ್ರಮಣ್ಯ: ಆಗಲಿ ಕ್ಲಾರಿಫಿಕೇಷನ್‌ನೇ ಕೇಳುತ್ತೇನೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಅವರು ಪ್ರಭಾವಿತರಾಗಿರುವುದು ನಿಮ್ಮಿಂದ. ಕ್ಲಾರಿಫಿಕೇಷನ್‌ನ್ನು ನಿಯಮ 69ರ ರೀತಿ ಕೇಳುತ್ತಾರೆ.

ಶ್ರೀ ಸಿದ್ದರಾಮಯ್ಯ: ಆ ರೀತಿ ಕಾನೂನು ಮತ್ತು ಸಂಸದೀಯ ಸಚಿವರು ಹೇಳುವುದಾದರೆ ನಮ್ಮದೇನೂ ತಕರಾರಿಲ್ಲ. Deviation of rules ಅಂದರೆ ok.

ಶ್ರೀ ರವಿ ಸುಬ್ರಮಣ್ಯ: ಈ 61 ಎಕರೆ 26.5 ಗುಂಟೆ ಭೂಮಿಗೆ ಖಾತೆ ಕೊಟ್ಟಿದ್ದಾರೆಯೇ?

ಉಪಾಧ್ಯಕ್ಷರು: ಆ ರೀತಿ ನೀವು ಕೇಳಲು ಬರುವುದಿಲ್ಲ. ಅವರು ಉತ್ತರದಲ್ಲಿ ವಿವರವಾಗಿ ಹೇಳಿದ್ದಾರೆ. ನೀವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ರವಿ ಸುಬ್ರಮಣ್ಯ: ಅವರಿಗೆ ಅದಕ್ಕೆ ಖಾತೆ ಕೊಟ್ಟಿದ್ದಾರೆಯೇ? ಅದು ಹೋಲ್ಡರ್ ಖಾತೆಯೇ? ಅಥವಾ ಸ್ವತ್ತಿನ ಖಾತೆಯೆ? ಯಾವ ಖಾತೆ ಕೊಟ್ಟಿದ್ದೀರಿ? ಯಾವ ಆಧಾರದ ಮೇಲೆ ಖಾತೆ ಮಾಡಿದ್ದೀರಿ?

ಉಪಾಧ್ಯಕ್ಷರು: ತಮಗೆ ಇದರ ಬಗ್ಗೆ ಚರ್ಚೆ ಬೇಕು ಎಂದರೆ ಇದೆನ್ನು ಬೇರೆ ರೂಪದಲ್ಲಿ ತನ್ನಿ.

ಶ್ರೀ ಎಸ್. ಸುರೇಶ್‌ಕುಮಾರ್: ಈಗಾಗಲೇ ನಾನು ಉತ್ತರದಲ್ಲಿ ಸ್ಪಷ್ಟಪಡಿಸಿದ್ದೇನೆ. ಮತ್ತಿಕೆರೆ ಸರ್ವೆ ನಂಬರ್ 7ರಲ್ಲಿ ಮುನಿಸಿಪಲ್ ನಂಬರ್ 12 ಆಗಿ ನೀಡಿರುವ ಖಾತೆಯನ್ನು ಅನುಭವದಾರರು ಮೆ: ಗೋಕುಲ ಎಜ್ಯುಕೇಷನ್ ಫೌಂಡೇಶನ್ ಸಂಸ್ಥೆ, ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಷನ್ ಆಫ್ ಟೆಕ್ನಾಲಜಿಯವರಿಗೆ 2009ರಲ್ಲಿ ಅನುಭವದಾರರ ಖಾತೆಯನ್ನು ನೀಡಲಾಗಿದೆ. ಉಳಿದುದಕ್ಕೆ ಮತ್ತಿಕೆರೆ ಗ್ರಾಮ 1964 ರಿಂದ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿರುತ್ತದೆ. ದೇವಸಂದ್ರ, ಚಿಕ್ಕಮಾರನಹಳ್ಳಿ ಗ್ರಾಮಗಳು 1995ರಲ್ಲಿ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿರುತ್ತವೆ. ದೇವಸಂದ್ರ ಮತ್ತು ಚಿಕ್ಕಮಾರನಹಳ್ಳಿ ಪ್ರದೇಶಗಳು ಹಿಂದಿನ ಹೆಬ್ಬಾಳ ಅಧಿಸೂಚಿತ ಪ್ರದೇಶದ ವ್ಯಾಪ್ತಿಯಲ್ಲಿದ್ದು ಖಾತೆ ಮತ್ತು ಕಂದಾಯಗಳನ್ನು ಆಗಲೇ ನಿಗದಿಪಡಿಸಿರುತ್ತಾರೆ. ಸರ್ವೆ ನಂಬರ್ 7, ವಿಸ್ತೀರ್ಣ 4 ಎಕರೆ 39 ಗುಂಟೆ ಜಮೀನು, ಮತ್ತಿಕೆರೆ ಗ್ರಾಮದ ಜಮೀನು ಮೂಲತಃ ಇನಾಮ್ತಿ ಜಮೀನಾಗಿದ್ದು Deputy Commissioner Inams Abolition ರವರು ದಿನಾಂಕ 12–4–1977 ರಂದು

ಎಂ.ಎಸ್. ರಾಮಯ್ಯ ರವರನ್ನು ಹಿಡುವಳಿದಾರರೆಂದು ಘೋಷಿಸಿರುತ್ತಾರೆ. ಬಿ.ಡಿ.ಎ. ವತಿಯಿಂದ ಭೂಸ್ವಾಧೀನದಿಂದ ಎಂ.ಎಸ್. ರಾಮಯ್ಯನವರ ಪರವಾಗಿ 1999ರಲ್ಲಿ ಡಿ ನೋಟಿಫೈ ಮಾಡಿರುತ್ತಾರೆ. 1982ರಲ್ಲಿ ಭೂ ನ್ಯಾಯ ಮಂಡಳಿ Deputy Commissioner Inams Abolitionರವರ ಆದೇಶವನ್ನು ಸ್ಥಿರೀಕರಿಸಿರುತ್ತಾರೆ. ಅಲ್ಲಿ ಅನಂತಯ್ಯ ಎಂಬ ಅರ್ಚಕರೊಬ್ಬರಿದ್ದರು. ಪುನಃ ಅರ್ಚಕ ಅನಂತಯ್ಯನವರ ಪರವಾಗಿ ಭೂ ನ್ಯಾಯ ಮಂಡಳಿಯು 1999ರಲ್ಲಿ ತಾನು ನೀಡಿದ್ದ ಆದೇಶವನ್ನು ಮನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು 2004ರಲ್ಲಿ ರದ್ದುಪಡಿಸಿ, Deputy Commissioner Inams Abolitionರವರಿಗೆ ಮರುಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳಲು remand ಮಾಡಿರುತ್ತಾರೆ. ಅರ್ಚಕ ಆನಂತರಯ್ಯನವರ ವಾರಸುದಾರರು ಕೆ.ಎ.ಟಿ.ಯಲ್ಲಿ ಅರ್ಜಿ ಸಲ್ಲಿಸಿದ್ದು, ಮಾನ್ಯ ಕೆ.ಎ.ಟಿ. ಸದರಿ ಅರ್ಜಿಯನ್ನು 2008ರಲ್ಲಿ ವಜಾಗೊಳಿಸಿರುತ್ತದೆ. ಅರ್ಚಕ ಅನಂತಯ್ಯನವರ ವಾರಸುದಾರರ ಹೆಸರಿಗೆ 2005ರಲ್ಲಿ ಅನುಭವದಾರರ ಖಾತೆಯನ್ನು ಬಿ.ಎಂ.ಪಿ. ಯಲ್ಲಿ ಮಾಡಿಕೊಂಡಿದ್ದನ್ನು ಆಕ್ಷೇಪಿಸಿ ಗೋಕುಲ ಎಜ್ಯುಕೇಷನ್ ಫೌಂಡೇಷನ್‌ರವರು 1976ರ ಕೆ.ಎಂ.ಸಿ. ಕಾಯ್ದೆಯ ಕಲಂ 114(ಎ) ಮೇರೆಗೆ ಖಾತೆಯನ್ನು ರದ್ದು ಮಾಡಲು ಕೋರಿದ್ದು ಬಿ.ಬಿ.ಎಂ.ಪಿ.ಯಲ್ಲಿ ವಿಚಾರಣೆಯ ನಂತರ ಖಾತೆಯನ್ನು ರದ್ದುಪಡಿಸಿ ಗೋಕುಲ ಎಜುಕೇಷನ್ ಫೌಂಡೇಷನ್ ಸೊಸೈಟಿಯವರ ಹೆಸರಿಗೆ ದಿನಾಂಕ 15-1-2009ರಲ್ಲಿ ಅನುಭವದಾರರ ಖಾತೆಯನ್ನು ವರ್ಗಾಯಿಸಲಾಗಿದೆ. ಖಾತೆಯ ವರ್ಗಾವಣೆಯ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ಚಕ ಅನಂತಯ್ಯನವರ ವಾರಸುದಾರರು ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 5082/2009, ದಿನಾಂಕ 22-4-2009ರಂದು ವಜಾಗೊಂಡಿರುತ್ತದೆ.

ಉಪಾಧ್ಯಕ್ಷರು: ಮಾನ್ಯ ನರೇಂದ್ರಬಾಬುರವರ ಗಮನ ಸೆಳೆಯುವ ಸೂಚನೆಯ ವಿಷಯವು ಹಣಕಾಸು ಇಲಾಖೆಯಿಂದ ಒಳಾಡಳಿತ ಇಲಾಖೆಗೆ ವರ್ಗಾವಣೆಯಾಗಿರುವುದರಿಂದ ಸಮಯಾವಕಾಶ ಕೋರಿದ್ದಾರೆ. ಆದ್ದರಿಂದ ಇದನ್ನು ಸೋಮವಾರ ತೆಗೆದುಕೊಳ್ಳೋಣ. ಅದಕ್ಕೆ ಅವರು ಪತ್ರವನ್ನು ಕೊಟ್ಟಿದ್ದಾರೆ.

ಶ್ರೀ ರವಿ ಸುಬ್ರಮಣ್ಯ: ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ.

ಉಪಾಧ್ಯಕ್ಷರು: No further clarification. ಅವಕಾಶ ಇಲ್ಲ. ದಯವಿಟ್ಟು ಕುಳಿತುಕೊಳ್ಳಿ. ಗಮನ ಸೆಳೆಯುವುದರಲ್ಲಿ ಇಷ್ಟೇ ಅವಕಾಶ. ತಾವು ಬೇರೆ ರೂಪದಲ್ಲಿ ತನ್ನಿ, ಈಗ ತಾವು ಕುಳಿತುಕೊಳ್ಳಿ.

ಈ) ವಿಷಯ: ರಾಯಚೂರು ಸಮೀಪ ಯರಮರಸ ಮತ್ತು ಯದ್ದಲ್ಲಾಪುರದಲ್ಲಿ ಹೊಸದಾಗಿ 2400 ಮೆಗಾವ್ಯಾಟ್ ಸಾಮರ್ಥ್ಯದ ಶಾಖೊತ್ಪನ್ನ ವಿದ್ಯುತ್ ಯೋಜನೆ ಸ್ಥಾಪಿಸುತ್ತಿರುವ ವಿರುದ್ಧ ಹೋರಾಟದ ಬಗ್ಗೆ

ಶ್ರೀ ನಾಡಗೌಡ ವೆಂಕಟರಾವ್ (ಸಿಂದನೂರು): ಮಾನ್ಯ ಉಪಾಧ್ಯಕ್ಷರೆ, ರಾಯಚೂರು ಸಮೀಪ ಯರಮರಸ ಮತ್ತು ಯದ್ದಲ್ಲಾಪುರದಲ್ಲಿ ಹೊಸದಾಗಿ 2400 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆ ಸ್ಥಾಪಿಸುತ್ತಿರುವ ವಿರುದ್ಧ ಅಲ್ಲಿನ ನಾಗರೀಕ ವೇದಿಕೆ ಹೋರಾಟ ನಡೆಸುತ್ತಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು): ಮಾನ್ಯ ಅಧ್ಯಕ್ಷರೇ,

ರಾಯಚೂರಿನಲ್ಲಿ ಹೊಸದಾಗಿ ಪ್ರಾರಂಭಿಸಲಿರುವ 2400 ಮೆ.ವ್ಯಾ. ಸಾಮರ್ಥ್ಯದ ಸೂಪರ್ ಥರ್ಮಲ್ ಪವರ್ ಸ್ಟೇಷನ್ ಬಗ್ಗೆ ಕೆಲವು ವ್ಯಕ್ತಿಗಳು ಹಾಗೂ ಒಂದೆರಡು ಸಂಸ್ಥೆಗಳು ಮತ್ತು ಕೆಲವು ರಾಜಕೀಯ ಸಂಘಟನೆಗಳು ವಿರೋಧ ಮಾಡಿದ್ದು ಸತ್ಯ. ಅದಕ್ಕೆ ತದ್ವಿರುದ್ದವಾಗಿ ಈ ಯೋಜನೆಗಳು ಅಲ್ಲಿ ಬರುವುದು ಅತ್ಯವಶ್ಯವೆಂದೂ ಕೂಡ ಅನೇಕ ಸಂಘ ಸಂಸ್ಥೆಗಳು, ವ್ಯಕ್ತಿಗಳು ಯೋಜನೆಯ ಪರವಾಗಿ ಹೋರಾಟ ಮಾಡಿದ್ದೂ ಕೂಡ ಅಷ್ಟೇ ಸತ್ಯ.

ಸದರಿ ಯೋಜನೆಗೆ ವಿರುದ್ಧ ಅವರು ಮಾಡಿದ ಯಾವುದೇ ಅಪಾದನೆಗಳಲ್ಲಿ ಸತ್ಯಾಂಶವಿಲ್ಲ. ಈ ಬಗ್ಗೆ ವಿವರವಾದ ಮಾಹಿತಿಯನ್ನೊಳಗೊಂಡ 24 ಪುಟಗಳ ಕಿರು ಹೊತ್ತಿಗೆಯ ಮೂಲಕ ಕರ್ನಾಟಕ ವಿದ್ಯುತ್ ನಿಗಮವು ಹತ್ತು ಸಾವಿರಕ್ಕೂ ಮೇಲ್ಪಟ್ಟು ಪ್ರತಿಗಳನ್ನು ದಿನ ಪತ್ರಿಕೆಗಳೊಂದಿಗೆ ಸೇರಿಸಿ ರಾಯಚೂರಿನಲ್ಲಿಯ ಜನರಿಗೆ ತಲುಪಿಸಿದೆ. ಪರಿಸರ ದೋಷಣೆಗೆ ಸಂಬಂಧಿಸಿದಂತೆ ಮಾಡಿದ ಎಲ್ಲಾ ಆಪಾದನೆಗಳನ್ನು ಒಂದೊಂದಾಗಿ ಆ ಕಿರು ಹೊತ್ತಿಗೆಯಲ್ಲಿ ವಿವರಿಸಿ ವಾಸ್ತವ ಸಂಗತಿಗಳನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ವಾಸ್ತವ ಅಂಶಗಳನ್ನು ಒಪ್ಪದೇ ಬೇರೆ ಉದ್ದೇಶಗಳಿಗಾಗಿ ಕೆಲವು ಜನರು ವಿರೋಧ ಮಾಡುತ್ತಿದ್ದರೂ ಬಹು ಜನರು ಅದಕ್ಕೆ ಪರವಾಗಿದ್ದಾರೆ. ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಿಕ್ಕೆ ಹಾಗೂ ಕರ್ನಾಟಕದ ಔದ್ಯಮಿಕ ಬೆಳವಣಿಗೆಗೆ ಈ ಕೇಂದ್ರಗಳನ್ನು ಸ್ಥಾಪಿಸುವುದು ಅತ್ಯಾವಶ್ಯವಾಗಿದೆ.